ಕೈಗಿಡುತ್ತಾ ಅಲ್ಲಿಂದ ಓಡಿ ಹೋದ್ಲು.

ಇಪ್ಪತ್ತರ ನೋಟನ್ನು ನೋಡತ್ಲೆ ಹೊಗಿ ಅಡರಿ ಕಪ್ಪಿಟ್ಟಿದ್ದ ಮಾದೇವಿಯ ಮುಖ ಇಷ್ಟಗಲ ಅರಳಿತು. ನಿಧಾನಕ್ಕೆ ಹೊರಗೆ ಇಣುಕಿ ಗಂಡನೂ ಮಗನೂ ನೋಡುತ್ತಿಲ್ಲವೆನ್ನುವುದನ್ನು ಖಾತ್ರಿ ಪಡಿಸಿಕೊಂಡು ಡಬರಿಗಳ ಮಧ್ಯ ಬಚ್ಚಿಟ್ಟಿದ್ದ ಸಣ್ಣ ಡಬ್ಬಿಯೊಂದನ್ನು ಹೊರತೆಗೆದು ಈಗಾಗಲೇ ಬಹಳಷ್ಟು ನೋಟುಗಳು ಮುದುಡಿ ಕುಳಿತಿದ್ದ ಅದರೊಳಗೆ ಇಪ್ಪತ್ತರ ನೋಟನ್ನು ತುರುಕಿ ಮತ್ತೆ ಅದರ ಜಾಗದಲ್ಲಿ ಮರಳಿಯಿಟ್ಟಳು. ತಾನು ತೆಗೆದುಕೊಳ್ಳಬೇಕೆಂದಿರುವ ಗ್ಯಾಸ್ ಸಿಲೆಂಡರಿಗಾಗಿ ತಾನು ದುಡಿದ ರೊಕ್ಕವನ್ನ ಗಂಡ ಮಗನಿಬ್ಬರ ಕಣ್ಣಿಗೂ ಬೀಳಲಾರದ ಹಾಗೆ ಕಳುವಿಲೆ ಕೂಡಿಡಾಕತ್ತಿದ್ದ ಮಾದೇವಿಗೆ ಎಲ್ಲಿ ಗಂಡನೋ ಮಗನೋ ನೋಡಿಬಿಟ್ಟಾರು ಎಂಬ ಭಯ. ಆದ್ರ ರೊಕ್ಕದ ಡಬ್ಬಿ ತುಂಬತೊಡಗಿದ್ದರಿಂದ ಗ್ಯಾಸ್ ಸಿಲಿಂಡರ್ ಬೇಗ ತೆಗೆದುಕೊಳ್ಳಬೇಕೆನ್ನುವ ಅವಳ ಆಸೆಗೆ ಮತ್ತಷ್ಟೂ ಬಲ ಬಂದಂತಿತ್ತು.

'ಭರ್ಮ್ಯಾ ಸಾಲಿಗೆ ಹೊತ್ತಾತಲೋ, ಅಡಿಗಿ ಮಾಡಾಕ ನೀರಿಲ್ಲ, ಎರಡು ಕೊಡ ನೀರ್ ಹಾಕಿ, ಉಂಡು, ಸಾಲಿಗೆ ಹೋಗ್ ಬಾ' ಎಂದು ಹೊರಾಗ ಅಂಗಳದಾಗ ಏನೋ ಆಟವಾಡುತ್ತಿದ್ದ ಭರ್ಮನನ್ನು ಕೂಗಿ ಕರೆದಳು. ಭರ್ಮ ತನಗೇನೂ ಕೇಳಿಸಿಲ್ಲ ಅನ್ನುವಂಗ ಕುಳಿತೇ ಇದ್ದ.

ಭರ್ಮ ಸಾಲಿಗೆ ಹೋಗಾಕ ಸುರುಮಾಡಿದ್ದು, 'ಅಲ್ಲಿ ಮುಂಜಾನಿ ಹಾಲನ್ನೂ ಕೊಟ್ಟು ಮಧ್ಯಾಹ್ನ ಊಟದ ಜೊತೆ ತತ್ತಿನೂ ಕೊಡ್ತಾರಲೆ' ಅಂತ ದ್ಯಾಮ ಬಂದು ಹೇಳಿದ ಮೇಲೆಯೇ. ಅಲ್ಲಿಯವರೆಗೂ ಸಾಲಿಯ ಮುಖವನ್ನೂ ಅವನು ನೋಡಿರಲಿಲ್ಲ.

ಗಾಳೆವ್ವನ ಗುಡಿಗೆ ಬಿಟ್ಟ ಕ್ವಾಣದ ಹಂಗ ಬೆಳೆದಿದ್ದ ಭರ್ಮ ನಾಕನೇ ಕ್ಲಾಸಿನೊಳಗ ಓದಾಕತ್ತಿದ್ರೂ ಅಕ್ಷರ ಅಷ್ಟಾಗಿ ತಲಿಗೆ ಹತ್ತಿರಲಿಲ್ಲವಾದ್ರೂ ತಪ್ಪು ತಪ್ಪಾಗಿಯಾದ್ರೂ ಓದೋದು ಬರೆಯೋದು ಲೆಕ್ಕ ಮಾಡೋದನ್ನು ತಕ್ಕಮಟ್ಟಿಗೆ ಕಲಿತಿದ್ದ. ಹಂಗ ಕಲಿಸಿದ್ದು ಆರೂ ಸಬ್ಜೆಕ್ಟನ್ನೂ ಒಬ್ಬರೇ ಹೇಳಿಕೊಡುತ್ತಿದ್ದ ಬಸಪ್ಪ ಅನ್ನುವ ಮಾಸ್ತಾರ. ಭರ್ಮನಿಗೆ ಓದು ಬರಹಕ್ಕಿಂತ ಅಲ್ಲಿ ಇಂಥವೆಲ್ಲಾ ತಿನ್ನಾಕ ಕುಡ್ಯಾಕ ಸಿಗ್ತಾವಲಾ ಅನ್ನುವ ಆಸೆಬುರುಕತನದಿಂದ ತನ್ನದೇ ಓಣಿಯ ಲಚುಮಿ, ದುರುಗಿ, ಶಿವ್ಯಾ ಮತ್ತ ತನ್ನ ಖಾಸಾ ದೋಸ್ತ ದ್ಯಾಮನ ಜೊತೆಗೂಡಿ ಮಹಾ ತಿಂಡಿಪೋತನಾಗಿದ್ದ ಭರ್ಮ ಸಾಲಿಕಡೆ ಮುಖ ಮಾಡಿದ್ದ.

ಒಮ್ಮೆ ತಾನು ಭಾಳ ಇಷ್ಟಪಡ್ತಿದ್ದ ಬಸಪ್ಪ ಮಾಸ್ತಾರ ಪಾಠ ಮಾಡುತ್ತಿದ್ದಾಗ 'ಮಕ್ಕಳಂದ್ರ ದೇವ್ರಿದ್ದಂಗ' ಅಂತ ಯಾವುದೋ ಸನ್ನಿವೇಶಕ್ಕ ಹೇಳಿದ್ದು ಕೇಳಿ ಭರ್ಮನಿಗೆ ನಗು ತಡಕೊಳ್ಳಾಕ ಆಗಲಾರದನ ದರುವು ಹಿಡಿಯುವಂಗ ನಕ್ಕುಬಿಟ್ಟಿದ್ದ. ತನ್ನವ್ವ ಮಾದೇವಿ ಆಗಾಗ ತನಗ ದನಕ್ಕ ಬಡಿಯುವಂಗ ಬಡಿಯೋದು ನೆನಪಿಗೆ ಬಂದು ಬಸಪ್ಪ ಮಾಸ್ತಾರರ ಮಾತು ನಗಚಟಗಿಯಂಗ ಕಂಡಿತ್ತು. ಎದ್ದುನಿಂತು ಭರ್ಮ 'ಸರ್ ನಮ್ಮವ್ವ ದೇವ್ರಿಗೆನೆ ಬಡಿತಾಳ್ರಿ' ಅಂತ ಹೇಳಿಬಿಟ್ಟಿದ್ದಕ್ಕ ಕಕ್ಕಾಬಿಕ್ಕಿಯಾಗಿದ್ದ ಬಸಪ್ಪ ಮಾಸ್ತಾರರು ನಂತರ ಅರ್ಥವಾದ ಅವನ ಅಮಾಯಕ ಮಾತಿಗೆ ಐದು ನಿಮಿಷ ನಕ್ಕಿದ್ದರು.

ಇಂತಹ ಭರ್ಮನಿಗೆ ನಾಯಿಗೆ ಇರುವಂಗ ವಿಶೇಷ ಮೂಗು ಇರುವುದು ಅವನ ಕೇರಿಯ ಎಲ್ಲರಿಗೂ ಗೊತ್ತಿದ್ದ ಸಾಮಾನ್ಯ ವಿಚಾರ. ವಾಸನೆ ಯಾವುದ ಇರಲಿ ಅದು ಎಲ್ಲಿಂದ ಬರಕತ್ತೈತಿ, ಎಂತಹ ವಾಸನೆ ಎಂಬಿತ್ಯಾದಿಗಳನ್ನೆಲ್ಲ ತನ್ನ ಮೂಗಿನ ಹೊಳ್ಳೆಗಳನ್ನು ಏರಿಸಿಕೊಂಡೆ ಕಂಡುಹಿಡಿದುಬಿಡುತ್ತಿದ್ದ. ಯಾರ ಮನ್ಯಾಗಾದ್ರೂ ಅಜ್ಞಾತ ಜಾಗದಾಗ ಇಲಿಯೇನಾದ್ರೂ ಸತ್ತು ಗಬ್ಬು ನಾತ ಹೊಡ್ಯಾಕತ್ತಿದ್ರ ಅದು ಎಲ್ಲೈತಿ ಅನ್ನೋದನ್ನ ಪತ್ತೆ ಹಚ್ಚಾಕ ಭರ್ಮನೇ ಎತ್ತಿದ ಕೈ. ಇವನೋ ಸಿಕ್ಕಿದ್ದೆ ಚಾನ್ಸು ಅಂತ ತಿಳಿದು ದೊಡ್ಡ ಪೊಲೀಸ್ರಂಗ ಧಿಮಾಕು ತೋರಿಸ್ತಾ ಮೂಗನ್ನು ಸೊರ್ ಸೊರ್ ಎಂದು ಮೇಲೆಳೆದುಕೊಂಡು ವಾಸನಿಯ ಜಾಡು ಹಿಡಿದು ಅದರ ಹುಡುಕಾಟ ನಡೆಸಿ ತನ್ನ ಕರಾಮತ್ತು ತೋರಿಸ್ತಿದ್ದ. ನೋಡುಗರಿಗೂ ಇವನ ಸತ್ತ ಇಲಿಯ ಶೋಧನಾ ಕಾರ್ಯದ ವೈಖರಿ ಒಂತರ ಮಜವಾಗಿ ಕಾಣ್ತಿತ್ತು. ಹಲವು 'ನಾಸಿಕ ಕಾರ್ಯಾಚರಣೆ'ಗಳ ನಂತರ ಕೊನೆಗೂ ಸತ್ತ ಇಲಿಯನ್ನ ಪತ್ತೆ ಹಚ್ಚಿ ಅದರ ಬಾಲವನ್ನು ಹಿಡಿದು ಹೊರಬಂದು ಎಲ್ಲರೆದುರಿಗೆ ಹುಲಿ ಬ್ಯಾಟಿಯಾಡಿ ಬಂದಿರುವರಂಗ ಪೋಸು ಕೊಟ್ಕೊಂತ ಊರ್ ಹೊರಗ ಶವಸಂಸ್ಕಾರ ಮಾಡಿ ಬಂದರೆ ಅಂದಿನ ಮಹತ್ಕಾರ್ಯ ಸಮಾಪ್ತಿಯಾದಂತೆ. ಅದಕ್ಕ ಬಹುಮಾನವಾಗಿ ಬೆಲ್ಲವನ್ನೋ ರಾತ್ರಿ ಉಳಿದಿದ್ದ ಅನ್ನ ಟಮಾಟಿ ಸಾರನ್ನೋ ಅಥವಾ ಇನ್ಯಾವುದಾದರೂ ಬರಿ ತಿನ್ನುವ ವಸ್ತುಗಳನ್ನೇ ಪಡೆದು ಹೊಟ್ಟೆ ತುಂಬಿಸಿಕೊಂಡು